# ಭಾವಕ್ಕೆ ಭಾಷೆಯ ವೇಷ

ಕನ್ನಡದ ವೈಯಾಕರಣಿ ಕೇಶಿರಾಜ ತನ್ನ ವ್ಯಾಕರಣ ಗ್ರಂಥ ಶಬ್ದ ಮಣಿದರ್ಪಣದ ನಾಂದೀ ಪದ್ಯದಲ್ಲಿ ಸರಸ್ವತಿಯನ್ನು 'ಶ್ರೀ ವಾಗ್ದೇವಿಗೆ, ಶಬ್ದದಿ ನಾವಾವಿಂದ್ರಿಯದ ವಿಷಯದೊಳುದ್ಭಾವಿಪ ನಿರ್ಮಳ ಮೂರ್ತಿಗೆ, ಇಳಾವಂದ್ಯೆಗೆ ಶಾಸ್ತ್ರ ಮುಖದೊಳ್ ಅವನತನಪ್ಪೆಂ' ಎಂದು ನಮಸ್ಕರಿಸಿದ್ದಾನೆ. ಇದು ಕೇವಲ ಪ್ರಾರ್ಥನಾ ಪದ್ಯವಲ್ಲ; ಭಾಷೆ ಮತ್ತು ಅಭಿವ್ಯಕ್ತಿಗಳಿಗಿರುವ ಸಂಬಂಧವನ್ನು ಸ್ಪಷ್ಟವಾಗಿ ಸೂಚಿಸುವ ಪದ್ಯ. ಮನುಷ್ಯ ತನ್ನ ಪಂಚೇಂದ್ರಿಯಗಳ ಮೂಲಕ ಪಡೆದ ಅನುಭವಗಳನ್ನು ಭಾಷೆಯ ಮಾಧ್ಯಮದ ಮೂಲಕ ತಕ್ಕಷ್ಟು ಯಶಸ್ವಿಯಾಗಿ ಹೊರ ಜಗತ್ತಿಗೆ ತಲುಪಿಸಬಲ್ಲ. ಭಾವಕ್ಕೆ ಭಾಷೆಯ ವೇಷ ತೊಡಿಸುವ ಕೆಲಸ ಜಟಿಲವಾದುದು. ಆದರೂ ಭಾವ ಭಾಷೆಗಳ ನಂಟು ಅಸಾಧಾರಣವಾದುದು. ಆದ್ದರಿಂದಲೇ ಕಾಳಿದಾಸ ವಾಕ್ಯ ಮತ್ತು ಅರ್ಥಗಳ ಸಂಬಂಧವನ್ನು ಪಾರ್ವತೀ ಪರಮೇಶ್ವರರ ಸಂಬಂಧಕ್ಕೆ ಹೋಲಿಸಿದ್ದಾನೆ, ಮಹಾ ಪಂಡಿತ ಜಾನ್‌ಸನ್ 'Language is the dress of thought' ಎಂದಿರುವುದೂ ನೆನಪಾಗುತ್ತದೆ.

ಭಾಷೆ ನಾಣ್ಯವಿದ್ದಂತೆ. ಈ ಹೋಲಿಕೆಗೆ ಹಲವು ಮುಗ್ಗಲುಗಳಿವೆ. ಸರ್ಕಾರ ನಾಣ್ಯಗಳನ್ನು ಟಂಕಿಸಿ, ಚಲಾವಣೆಗೆ ತರುವಂತೆ ಜನಮನದ ಟಂಕಸಾಲೆಯಲ್ಲಿ ಮಾತಿನ ನಾಣ್ಯ ಟಂಕಿಸಲ್ಪಟ್ಟು, ನಿತ್ಯ ಜೀವನದಲ್ಲಿ ಚಲಾವಣೆ ಪಡೆಯುತ್ತವೆ. ಅತಿ ಬಳಕೆಯಿಂದ ನಾಣ್ಯಗಳು ಸವೆದು ಹೋಗುವಂತೆ ಶಬ್ದಗಳೂ ಕಾಲದಿಂದ ಕಾಲಕ್ಕೆ ಸವೆದು ಹೋಗುತ್ತವೆ. ಸವೆದ ನಾಣ್ಯದ ಬದಲು ಹೊಸ ನಾಣ್ಯದ ಸೃಷ್ಟಿ ಅನಿವಾರ್ಯವಾಗುವಂತೆ, ಕಾಲದಿಂದ ಕಾಲಕ್ಕೆ ಭಾಷಾ ಪ್ರಪಂಚದಲ್ಲಿಯೂ ಹೊಸ ಸೃಷ್ಟಿಯ ಪ್ರಕ್ರಿಯೆ ನಡೆಯುತ್ತಲೇ ಇರುತ್ತದೆ. ಭಾಷೆಯೊಂದಿಗೆ ಸಮುದಾಯದ ಬದುಕೂ ಬೆಸೆದುಕೊಂಡಿರುವುದರಿಂದ ಸಮುದಾಯದ ಸಂಸ್ಕೃತಿ, ಜೀವನ ಕ್ರಮ, ಅದರಲ್ಲಿ ಘಟಿಸುವ ಏರಿಳಿತ– ಇತ್ಯಾದಿಗಳೆಲ್ಲವೂ ಭಾಷೆಯೊಂದಿಗೆ ತಳಕು ಹಾಕಿಕೊಂಡಿರುತ್ತವೆ. ಜೀವಂತ ಭಾಷೆ ಚಲನಶೀಲವಾಗಿರುವುದರಿಂದ ಅಗತ್ಯಗಳಿಗೆ ಅನುಗುಣವಾಗಿ, ಕಾಲ ಕಾಲಕ್ಕೆ ಪದಗಳು ತಮ್ಮ ಅರ್ಥಗಳನ್ನು ಬದಲಾಯಿಸಿಕೊಳ್ಳಬೇಕಾಗುತ್ತದೆ. ಅಲ್ಲದೆ ಅಂದಂದಿನ ಒತ್ತಡಗಳಿಗೆ ಅನುಗುಣವಾಗಿ ಹೊಸ ಪದಗಳೂ ಸೃಷ್ಟಿಗೊಳ್ಳುವುದು ಅನಿವಾರ್ಯವಾಗುತ್ತದೆ. ಕೆಲವು ಸಂದರ್ಭದಲ್ಲಿ ಹಳೆಯ ಪದವೊಂದು ವಿಶಿಷ್ಟವಾದ ಅರ್ಥದಲ್ಲಿ ಬಳಕೆಯಾಗಿ ಹೊಸ ತೇಜಸ್ಸನ್ನು ಪಡೆಯುವುದೂ ಉಂಟು, ಪ್ರತಿಭಾ ಶಕ್ತಿಯ ಬಲದಿಂದ ಕವಿಯೊಬ್ಬ ಅತಿ ಸಾಮಾನ್ಯವೆನ್ನಿಸಬಹುದಾದ ಪದಕ್ಕೆ ತೀವ್ರವಾದ ಸಂವಹನ ಸಾಮರ್ಥ್ಯವನ್ನು ಧಾರೆಯೆರೆಯುವ ಸಾಧ್ಯತೆಯೂ ಇದೆ.

ಭಾಷೆ ಎಂಬ ನಾಣ್ಯಕ್ಕೆ ಎರಡು ಮುಖ. ಒಂದು ಮುಖ ಲೋಕೋಪಯೋಗಿಯಾದುದು. ವ್ಯವಹಾರದ ಜಗತ್ತಿನಲ್ಲಿ ಚಲಾವಣೆಯಲ್ಲಿರುವ ಲೋಕೋಪಯೋಗಿಯಾದ ಭಾಷೆ ನಿರ್ದಿಷ್ಟವಾದ ಅರ್ಥವನ್ನು ಸಂವಹನ ಮಾಡಿ 'ಕೃತಾರ್ಥ'ವಾಗುತ್ತದೆ; ಅದು ನಿತ್ಯ ಜೀವನದಲ್ಲಿ ತನ್ನ ಕರ್ತವ್ಯವನ್ನು ಯಶಸ್ವಿಯಾಗಿ ನಿರ್ವಹಿಸುತ್ತದೆ. ಉದಾಹರಣೆಗೆ– 'ಎತ್ತು' ಎಂಬ ಪದ ಕಿವಿಗೆ ಬಿದ್ದೊಡನೇ ಕನ್ನಡಿಗನ ಒಳಗಣ್ಣಿನಲ್ಲಿ ನಾಲ್ಕು ಕಾಲು, ಎರಡು ಕೊಂಬು– ಇತ್ಯಾದಿ ಇರುವ ನಿರ್ದಿಷ್ಟ ಪ್ರಾಣಿಯೊಂದರ ಚಿತ್ರ ಕಾಣಿಸಿಕೊಳ್ಳುತ್ತದೆ. ಆದರೆ ಭಾವನಾ ಜಗತ್ತಿನ ಮಾತೇ ಬೇರೆ. ಭಾವನೆಗಳಿಗೆ ಭಾಷೆಯ ವೇಷ ತೊಡಿಸುವ ಕೆಲಸ ನಿಜಕ್ಕೂ ಸುಲಭವಲ್ಲ. ಸೂಕ್ಷ್ಮ ಭಾವಗಳ ಅಭಿವ್ಯಕ್ತಿಗೆ ಭಾಷೆ ತಡವರಿಸುತ್ತದೆ, ಮಾತ್ರವಲ್ಲ. ಬಹಳ ಸಾರಿ ಸೋಲುತ್ತದೆ. ಸ್ನೇಹಿತನೊಬ್ಬ ತನಗೆ ತುಂಬಾ ತಲೆನೋವು ಎನ್ನುತ್ತಾನೆ ಎಂದಿಟ್ಟುಕೊಳ್ಳೋಣ. ಆತ ಬಳಸಿದ 'ತುಂಬಾ' ಎನ್ನುವ ವಿಶೇಷಣ ಆತನ ತಲೆನೋವಿನ ತೀವ್ರತೆಯನ್ನು ನಮ್ಮ ಅರಿವಿಗೆ ತರಲು ಅಸಮರ್ಥವಾಗುತ್ತದೆ. ಇಂಥ ತೊಡಕುಗಳನ್ನು ನಿವಾರಿಸುವುದಕ್ಕಾಗಿಯೇ ಭಾಷೆ ಗಾದೆ, ನುಡಿಗಟ್ಟು, ಅಲಂಕಾರ, ಉಪಮಾನ–ಮುಂತಾದುವುಗಳನ್ನು ಸೃಷ್ಟಿಸಿಕೊಳ್ಳುತ್ತದೆ. 'ನನ್ನ ತಲೆ ಸಿಡಿದು ಹೋಗುತ್ತಿದೆ', 'ಬಿಸಿಲಲ್ಲಿ ಮೈ ಬೆಂದು ಹೋಯಿತು', 'ಹಾಲು ಕುಡಿದಷ್ಟು ಸಂತೋಷವಾಯಿತು' –ಇಂಥ ಮಾತುಗಳು ತಮ್ಮ ಅತಿ ಪರಿಚಯದ ಪರಿಮಿತಿಯನ್ನೂ ಮೀರಿ ಭಾವ ಸಂವಹನದಲ್ಲಿ ತಕ್ಕಷ್ಟು ಯಶಸ್ವಿಯಾಗುತ್ತವೆ ಅಲ್ಲವೇ? ತೊಡೆ ಮುರಿದು ಬಿದ್ದ ದುರ್ಯೋಧನನನ್ನು 'ರುಧಿರದ ತಿಲಕವಾದ ನೆಲ್ಲೆ ಧರಾಂಗನೆಗೆ' ಎನ್ನುವ ಕುಮಾರ ವ್ಯಾಸನ ಮಾತು, 'ಹುಣ್ಣಿಮೆ ಚಂದಿರನ ಹೆಣ ಬಂತು ಮುಗಿಲಾಗ' –ಎಂಬ ಬೇಂದ್ರೆಯವರ ಸಾಲು ಸಾಮಾನ್ಯ ಮಾತುಗಳು ಹೇಗೆ ಕವಿ ಸ್ಪರ್ಶದಿಂದ ಝಗ್ಗೆಂದು ಹೊಸ ಬೆಳಕಿನಿಂದ ಬೆಳಗುತ್ತವೆ ಎಂಬುದಕ್ಕೆ ಕೆಲವು ನಿದರ್ಶನಗಳು.

ಆದುದರಿಂದಲೇ ಡಾ.ಹಾ.ಮಾ. ನಾಯಕರು ಹೀಗೆನ್ನುತ್ತಾರೆ: 'ಒಂದು ರೀತಿಯಲ್ಲಿ ಕಾವ್ಯ ಅಹಲ್ಯೋದ್ಧಾರದ ಹಾಗೆ, ಯಾವುದೋ ಪದ ಎಲ್ಲಿಯೋ ಇರುತ್ತದೆ. ಕವಿಯ ಪ್ರತಿಭಾ ಸ್ಪರ್ಶದಿಂದ ಅದು ಅರ್ಥಲೋಕಗಳನ್ನು ನಿರ್ಮಿಸಿಬಿಡುತ್ತದೆ; ಹೊಸ ಶಕ್ತಿ, ಸೌಂದರ್ಯಗಳನ್ನು ಪಡೆದ ಈ ಕಾವ್ಯ ಭಾಷೆ ಭಾಷೆಯ ವೈಭವವನ್ನೇ ಹೆಚ್ಚಿಸುತ್ತದೆ.'

■ ವೈನತೇಯ

## ಮಾತೇ ಮುತ್ತು

★ ಮನೆ ನಿಂತಿರುವುದು ಮಡದಿಯಿಂದ, ಅದು ಬಿದ್ದರೆ ಗಂಡನ ತಲೆಯ ಮೇಲೆ!

–ಬೀಚ

★ ಹೊಟ್ಟೆಕಿಚ್ಚು ಬಾಗಿಲಿನಿಂದ ಪ್ರವೇಶ ಮಾಡುವಷ್ಟರಲ್ಲಿ, ಪ್ರೇಮವು ಕಿಟಕಿಯಿಂದ ಮಾಯವಾಗಿ ಬಿಡುತ್ತದೆ.

–ಅಜ್ಞಾತ

★ ಯಾರಿಗೇತರಲಿ ಇಷ್ಟವೋ ಅದುವೇ ಸುಖ.

–ದ.ರಾ.ಬೇಂದ್ರೆ

★ ಪ್ರೇಮಿ ಬೇರೆಯವರಿಂದ ಬೇಸರ ಪಟ್ಟುಕೊಳ್ಳುವುದೇಕೆಂದರೆ– ಅವನು ಸದಾ ತನ್ನದೇ ವಿಷಯಗಳನ್ನು ಮಾತನಾಡುತ್ತಿರುತ್ತಾನೆ!

–ಲಾ ರೋಶ್ ಫೂಕೋ

★ ಒಂದು ಸಾಹಿತ್ಯ ಜೀವಂತ ಇರಬೇಕಾದರೆ ಅದಕ್ಕೆ ಮಕ್ಕಳ ಸಾಹಿತ್ಯದ ಒಂದು ಸ್ತರ ಇರಲೇಬೇಕು.

–ಕೆ.ವಿ.ತಿರುಮಲೇಶ್

★ ಉಪದೇಶ ಮಾಡುವವನ ದೋಷ ಕೂಡಲೇ ನಮ್ಮನ್ನು ಆಕರ್ಷಿಸುತ್ತದೆ.

–ಲೂಥರ್

★ ತನುವಿನ ಕೋಪ ತನ್ನ ಹಿರಿತನದ ಕೇಡು, ಮನದ ಕೋಪ ತನ್ನ ಅರಿವಿನ ಕೇಡು.

–ಬಸವಣ್ಣ

★ ಬರೀ ವಿದ್ಯೆಯಿಂದಾಗಲೀ, ತಪಸ್ಸಿನಿಂದಾಗಲೀ ಯಾರೂ 'ಪಾತ್ರ'ನೆನಿಸುವುದಿಲ್ಲ. ಯಾರಲ್ಲಿ ನಡತೆ, ವಿದ್ಯೆ ಮತ್ತು ತಪಸ್ಸು ಇರುತ್ತವೆಯೋ ಅವನೇ 'ಸತ್ಪಾತ್ರ.'

–ಯಾಜ್ಞವಲ್ಕ್ಯ

★ ನಿಮಗೆ ಕಷ್ಟ, ಮುಜುಗರ ಎನ್ನಿಸುವ ಸಂದರ್ಭಗಳಲ್ಲಿ ಕ್ಷಮಿಸುವುದು ಅಭ್ಯಾಸವಾದರೆ, ನಿಮ್ಮ ಕಷ್ಟಗಳು ತಿಳಿಯಾಗಿ ಮುಖದ ಮೇಲೆ ನಗು ಮೂಡುತ್ತದೆ.

–ಮಾರ್ಕ್‌ಟ್ವೈನ್

★ ಕಷ್ಟಗಳು ಹೆಚ್ಚಾದಂತೆ ಬುದ್ಧಿ ಚುರುಕಾಗಿ ಕೆಲಸ ಮಾಡುತ್ತದೆ.

–ಎಮರ್ಸನ್

★ ಭಕ್ತಿ ಸುಖಕ್ಕಿಂತ ಇತರ ಸುಖ ಎಲ್ಲಿಯದು?

–ಹರಿಹರ

★ ಕೆಟ್ಟ ಕೆಲಸಗಳಿಂದ ನೀನು ಪಾರಾಗಬೇಕೆಂದರೆ ಗೌರವಕ್ಕೆ, ಭಗವಂತನಿಗೆ ಹಾಗೂ ಮೃತ್ಯುವಿಗೆ ಹೆದರಬೇಕು.

–ಬೈಬಲ್

★ ದಡ್ಡರಿಗಿಂತ ಬುದ್ಧಿವಂತರೇ ಮನೆ ಮುರುಕರು ಮತ್ತು ಮನ ಒಡೆಯುವವರು.

–ರೂಸೋ

★ ಮನಸ್ಸು ಮೃದುವಾಗಬೇಕು, ಹೃದಯ ಅರಳುತ್ತಾ ಹೋಗಬೇಕು. ಅದೇ ಸಂಸ್ಕೃತಿ.

–ರಸ್ಕಿನ್